ವರ್ಷ	ಶಾಲಾ ಕಾಲೇಜ್, ವಿಶ್ವವಿದ್ಯಾನಿಲಯ ಹಾಗೂ ಸಂಸ್ಥೆಗಳ ಸ್ಥಳಗಳಲ್ಲಿ	ರಸ್ತೆಬದಿ, ರಿಂಗ್ ರಸ್ತೆ ಹಾಗೂ ಇತ್ಯಾದಿ ಸರ್ಕಾರಿ ಸ್ಥಳಗಳಲ್ಲಿ	ಒಟ್ಟು
2003–04	24 00 ಹೆ	141 00 ಹೆ	165 00 ಹೆ
2004–05	2 50 ಹೆ	37 50 ಹೆ	40 00 ಹೆ
2005–06	3 00 ಹೆ	22 00 ಹೆ	25 00 ಹೆ
ಒಟ್ಟು	**29 50 ಹೆ**	**200 50 ಹೆ**	**230 00 ಹೆ**

797 (1192) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಉಪ ನೋಂದಣಾದಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು ,

ಆ) ಈ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು , (ವಿವರವನ್ನು ನೀಡುವುದು) ,

ಇ) ಈ ಕಛೇರಿಗಳಲ್ಲಿ ಕೆಲಸದ ಒತ್ತಡ ಜಾಸ್ತಿಯಿದ್ದು ಸಾರ್ವಜನಿಕರಿಗೆ ಶೀಘ್ರ ಸೇವೆ ಮಾಡಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಹಾಗಿದ್ದಲ್ಲಿ, ಮೈಸೂರು ನಗರ ಹಾಗೂ ತಾಲ್ಲೂಕಿಗೆ ಹೊಸ ಉಪ ನೋಂದಣಾಧಿಕಾರಿಗಳ ಕಛೇರಿಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಮೈಸೂರು ನಗರದಲ್ಲಿ ಒಟ್ಟು ಮೂರು ಉಪ ನೋಂದಣಿ ಕಛೇರಿಗಳು ಇರುತ್ತವೆ ಅವುಗಳೆಂದರೆ

1) ಉಪ ನೋಂದಣಿ ಕಛೇರಿ, ಮೈಸೂರು (ಉತ್ತರ)

2) ಉಪ ನೋಂದಣಿ ಕಛೇರಿ, ಮೈಸೂರು (ದಕ್ಷಿಣ)

3) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆವರಣದಲ್ಲಿರುವ ಉಪ ನೋಂದಣಿ ಕಛೇರಿ

ಆ) ಉಪ ನೋಂದಣಿ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ವಿವರ

	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ
1	ಕೇಂದ್ರ ಸ್ಥಾನ ಉಪ ನೋಂದಣಾಧಿಕಾರಿಗಳು	1	1

2	ಹಿರಿಯ ಉಪ ನೋಂದಣಾಧಿಕಾರಿಗಳು	3	3
3	ಪ್ರಥಮ ದರ್ಜೆ ಸಹಾಯಕರು	1	1
4	ದ್ವಿತೀಯ ದರ್ಜೆ ಸಹಾಯಕರು	4	4
5	ಅಟೆಂಡರ್	1	1
6	ಡಿ–ಗ್ರೂಪ್ ನೌಕರರು	1	1
	ಒಟ್ಟು	**11**	**11**

2) ಉಪ ನೋಂದಣಿ ಕಛೇರಿ, ಮೈಸೂರು (ದಕ್ಷಿಣ)

	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ
1	ಕೇಂದ್ರ ಸ್ಥಾನ ಉಪ ನೋಂದಣಾಧಿಕಾರಿಗಳು	1	1
2	ಹಿರಿಯ ಉಪ ನೋಂದಣಾಧಿಕಾರಿಗಳು	3	3
3	ಪ್ರಥಮ ದರ್ಜೆ ಸಹಾಯಕರು	1	1
4	ದ್ವಿತೀಯ ದರ್ಜೆ ಸಹಾಯಕರು	4	4
5	ಅಟೆಂಡರ್	1	1
6	ಡಿ–ಗ್ರೂಪ್ ನೌಕರರು	2	2
	ಒಟ್ಟು	**12**	**12**

3) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆವರಣದಲ್ಲಿರುವ ಉಪ ನೋಂದಣಿ ಕಛೇರಿ

	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ
1	ಉಪ ನೋಂದಣಾಧಿಕಾರಿಗಳು	1	1
2	ಪ್ರಥಮ ದರ್ಜೆ ಸಹಾಯಕರು	1	1
3	ದ್ವಿತೀಯ ದರ್ಜೆ ಸಹಾಯಕರು	2	2
4	ಡಿ–ಗ್ರೂಪ್ ನೌಕರರು	1	1
	ಒಟ್ಟು	**5**	**5**

ಇ) ಮೇಲೆ ಉಲ್ಲೇಖಿಸಿದ ಉಪ ನೋಂದಣಿ ಕಛೇರಿಗಳಲ್ಲಿ ಸಾಕಷ್ಟು ಉಪ ನೋಂದಣಾಧಿಕಾರಿಗಳು ಕೆಲಸ ನಿರ್ವಹಿಸುತ್ತಿರುವುದರಿಂದ ಹಾಗೂ ಈಗ ಇಲಾಖೆಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸಂಪೂರ್ಣ ಗಣಕೀಕರಣವಾಗಿರುವುದರಿಂದ ಸಾರ್ವಜನಿಕ ಕೆಲಸ ಕಾರ್ಯಗಳು ಅತೀ ಶೀಘ್ರದಲ್ಲಿ ಆಗುತ್ತಿವೆ

ಈ) ಮೈಸೂರು ನಗರದಲ್ಲಿ ಹೊಸ ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸುವ ವಿಷಯ ಸದ್ಯಕ್ಕೆ ಚಿಂತನೆಯಲ್ಲಿ ಇರುವುದಿಲ್ಲ

798 (1193) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನಲ್ಲಿ ನಿರ್ಮಿಸುತ್ತಿರುವ ಹೊಸ ತಾಲ್ಲೂಕು ಕಛೇರಿ ನಿರ್ಮಾಣ ಕಾರ್ಯವನ್ನು ಪ್ರಾರಂಬಿಸಿದ್ದು ಯಾವಾಗ ಹಾಗೂ ಇದರ ಅಂದಾಜು ವೆಚ್ಚ ಎಷ್ಟು ,

ಆ) ಉದ್ದೇಶಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಯೋಜಿಸಿರುವ ಕಛೇರಿಗಳು ಯಾವುವು ,

ಇ) ಈ ಕಟ್ಟಡದಲ್ಲಿ ಬರುವ ಕೊರಡಿಗಳ ಸಂಖ್ಯೆ ಎಷ್ಟು ,

ಈ) ನಿರ್ಮಿಸಲಾಗುತ್ತಿರುವ ತಾಲ್ಲೂಕು ಕಛೇರಿಯ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಈ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ 28 4 2005 ಈ ಕಾಮಗಾರಿಯ ಅಂದಾಜು ಮೊತ್ತ ರೂ 600 00 ಲಕ್ಷಗಳು

ಆ) ಉದ್ದೇಶಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಯೋಜಿಸಿರುವ ಕಛೇರಿ ವಿವರಗಳು

1 ಮೈಸೂರು ತಾಲ್ಲೂಕು ಕಛೇರಿ
2 ಸಹ ನಿರ್ದೇಶಕರು, ಭೂ ದಾಖಲೆಗಳ ಇಲಾಖಾ ಕಛೇರಿ
3 ಉಪ ನೋಂದಣಾಧಿಕಾರಿಗಳ ಕಛೇರಿ (ಉತ್ತರ ಮತ್ತು ದಕ್ಷಿಣ)
4 ತಾಲ್ಲೂಕು ಪಂಚಾಯಿತಿ ಕಛೇರಿ (ಉತ್ತರ ಮತ್ತು ದಕ್ಷಿಣ)
5 ಕೃಷಿ ಉಪ ನಿರ್ದೇಶಕರ ಕಛೇರಿ

ಇ)1 ಬೇಸ್‌ಮೆಂಟ್ ಅಂತಸ್ತು – ವಾಹನ ನಿಲುಗಡೆಗಾಗಿ
2 ನೆಲ ಅಂತಸ್ತು – 13 ಕೊರಡಿಗಳು
3 ಮೊದಲನೇ ಅಂತಸ್ತು – 14 ಕೊರಡಿಗಳು
4 ಎರಡನೇ ಅಂತಸ್ತು – 16 ಕೊರಡಿಗಳು

ಈ) ಈ ಕಾಮಗಾರಿಯ ನಿರ್ಮಾಣದ ಕೆಲಸ ಆಗಸ್ಟ್ 2007ರೊಳಗೆ ಪೂರ್ಣಗೊಳಿಸಲಾಗುವುದು

799 (1194) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಇರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಯಾವುವು,

ಆ) ಈ ಕೈಗಾರಿಕೆಗಳ ಪೈಕಿ ಮಹಿಳಾ ಉದ್ಯಮಿಗಳು ನಡೆಸುತ್ತಿರುವ ಕೈಗಾರಿಕೆಗಳು ಯಾವುವು ,